ಎಕ್ಸಕ್ಯೂಷನ ನಂಃ 4/2010

ಡಿ ಡಬ್ಲುಃ 2

ದಿನಾಂಕಃ 11-06-2015

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಜಿ ಜಿ ಪಿ ವಕೀಲರಿಂದ.

ದಾವಾ ಆಸ್ತಿಯ ಮೂಲ ಮಾಲೀಕರು ಅಬ್ದುಲ್‌ಖಾದರ್ ಹುಸೇನಮಿಯಾ ಮತ್ತೂರ‌ಅಲಿ ಆಗಿರುತ್ತಾರೆ. ಇದು ಇವರಿಗೆ ಖರೀದಿ ಪತ್ರದ ಮುಖಾಂತರ ಬಂದಿರುತ್ತದೆ. 2009 ರಲ್ಲಿ ಖರೀದಿ ಪತ್ರ ಆಗಿರುತ್ತದೆ. ತಿಂಗಳು ಮತ್ತು ದಿನಾಂಕ ನೆನಪಿಲ್ಲ. ಸಬ್ ರಿಜಿಸ್ಟರ ಕಚೇರಿಯಲ್ಲಿ ಖರೀದಿ ಪತ್ರ ರಿಜಿಸ್ಟರ ಆಗಿರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ಹಾಜರು ಪಡಿಸಿರುವ ಕಾಗದ ಪತ್ರಗಳು ಎಲ್ಲವೂ ಸೃಷ್ಟಿ ಮಾಡಿಕೊಂಡ ದಾಖಲೆಗಳು ಎಂದರೆ ಸರಿಯಲ್ಲ. ಖರೀದಿ ಪತ್ರದಲ್ಲಿರುವ ಸಹಿ ನಜೀರಅಹ್ಮದ ಮಾಲದಾರ ಎಂಬುವವರದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮತ್ತೊಂದು ಖರೀದಿ ಪತ್ರ ಶಮಶುದ್ದಿನ ತಂಬಾಕವಾಲೆ ಎಂಬುವವರ ಹೆಸರಿನಲ್ಲಿ ಇರುತ್ತದೆ. ಇದನ್ನು ಸಹ ನಾನೇ ಹಾಜರುಪಡಿಸಿರುತ್ತೇನೆ. ನಿ.ಡಿ 2 ರಲ್ಲಿರುವ ಸಹಿಯು ಸಹ ನಜೀರಅಹ್ಮದ ಮಾಲದಾರ ಅವರದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಡಿಕ್ರಿದಾರರೇ ದಾವಾ ಆಸ್ತಿಯ ಮಾಲೀಕರು ಆಗಿರುತ್ತಾರೆ ಎಂದರೆ ಸರಿಯಲ್ಲ. ಡಿಕ್ರಿದಾರನಿಗೆ ನಜೀರಅಹ್ಮದ ಮಾಲದಾರ ಅವರು ಖರೀದಿ ಪತ್ರದ ಮುಖಾಂತರ ದಾವಾ ಆಸ್ತಿಗಳನ್ನು ಈ ಮೊದಲೇ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರ್‌ಎ ಸಂಖ್ಯೆ 77/2005 ರಲ್ಲಿ ಮಾಲದಾರ ಅವರು 1ನೇ ಎದುರುದಾರರು ಆಗಿದ್ದು ನಾನು ಸದರಿ ಅಪೀಲನಲ್ಲಿ ಅಪೀಲುದಾರನಾಗಿರುತ್ತೇನೆ ಎಂದರೆ ಸರಿ. ಸದರಿ ಅಪೀಲಿನಲ್ಲಿ ಡಿಕ್ರಿದಾರನನ್ನು ಎದುರುದಾರನನ್ನಾಗಿ ನ್ಯಾಯಾಲಯದ ಆದೇಶದ ಮೇಲೆ ಸೇರಿಸಲಾಗಿರುತ್ತದೆ ಎಂದರೆ ಗೊತ್ತಿಲ್ಲ. ನಾನು ಸಲ್ಲಿಸಿದ ಅಪೀಲು ದಿನಾಂಕ 07-09-2009 ರಂದು ವಜಾ ಆಯಿತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಜೀರಅಹ್ಮದ ಮಾಲದಾರ ಅವರ ಪರವಾಗಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಆರ್‌ಎ 77/2005 ರ ಆದೇಶದ ಮೇಲೆ ಮೇಲ್ಮನವಿಯನ್ನು ಸಲ್ಲಿಸಿಲ್ಲ. ನನ್ನ ಮೇಲೆ ಡಿಕ್ರಿದಾರನು ದಾವಾ ಆಸ್ತಿಯ ಕಬ್ಜಾವನ್ನು ಪಡೆಯಲು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಕಬ್ಜಾ ಕೊಡುವುದನ್ನು ತಪ್ಪಿಸಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಹಸನಸಾಬ ಮರ್ದನಸಾಬ ದೊಡ್ಡಮನಿ ಎಂಬುವವರು ನನ್ನ ತಂದೆ ಎಂದರೆ ಸರಿ. ನನ್ನ ತಂದೆ ಮೂಲತಃ ಹತ್ತಿಮತ್ತೂರ ಗ್ರಾಮದವರು. ಹತ್ತಿಮತ್ತೂರ ಗ್ರಾಮದಲ್ಲಿ ನನ್ನ ತಂದೆಗೆ ಅವರ ತಂದೆಯ ಹೊಲ ಮತ್ತು ಮನೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯು ದಾವಾ ಆಸ್ತಿಯಲ್ಲಿ ಬರುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ. ನಜೀರಅಹ್ಮದ ಮಾಲದಾರ ಅವರು ದಾವಾ ಆಸ್ತಿಯನ್ನು ಡಿಕ್ರಿದಾರನಿಗೆ ಖರೀದಿ ಕೊಡುವ ಪೂರ್ವದಲ್ಲಿ ಆಸ್ತಿಯನ್ನು ಖರೀದಿ ಮಾಡಿದ್ದರು ಎಂದರೆ ಸರಿ. ನಜೀರಅಹ್ಮದ ಮಾಲದಾರ ಅವರು ದಿನಾಂಕ 17-11-1988 ರಲ್ಲಿ ದಾವಾ ಆಸ್ತಿಯ ಮೂಲ ಮಾಲೀಕರಾದ ಮೋದಿನಬಿ

ಅಬ್ದುಲ್‌ಕರಿಮಸಾಬ ಮನಿಯಾರ ಕಡೆಯವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ನಜೀರಅಹ್ಮದ



ಮಾಲದಾರ ಅವರ ಮಕ್ಕಳು ರಾಣೆಬೆನ್ನೂರಿನಲ್ಲಿ ಖಾಸಗಿ ನೌಕರಿ ಮಾಡುತ್ತಾರೆ ಎಂದರೆ ಗೊತ್ತಿಲ್ಲ. ನಜೀರಅಹ್ಮದ ಅವರು ರಾಣೆಬೆನ್ನೂರಿಗೆ ಹೋಗಿ ಬರುತ್ತಿದ್ದರು ಎಂದರೆ ಗೊತ್ತಿಲ್ಲ. ನಜೀರಅಹ್ಮದಮಾಲದಾರ ಅವರು ರಾಣೆಬೆನ್ನೂರಿನಲ್ಲಿ ಇದ್ದಾಗ ನನ್ನ ತಂದೆ ಮತ್ತು ತಂಬಾಕವಾಲೆ ಅವರು ಗೈರು ಹಕ್ಕಿನಿಂದ ದಾವಾ ಆಸ್ತಿಯಲ್ಲಿ ಸ್ವಾದೀನಕ್ಕೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಜೀರಅಹ್ಮದ ಅವರು ಕಬ್ಜಾ ಕೋರಿ ಇದೇ ನ್ಯಾಯಾಲಯದಲ್ಲಿ ದಾವೆ ಮಾಡಿದ್ದರು ಎಂದರೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ನನ್ನ ತಂದೆ ಪಕ್ಷಗಾರರು ಆಗಿದ್ದರು ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಆ ಪ್ರಕರಣವು ವಿಚಾರಣೆ ಮುಗಿದು ತೀರ್ಪು ಆಗಿರುತ್ತದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಂದೆ ಮತ್ತು ತಂಬಾಕವಾಲೆ ಅವರು ಅಸಲು ದಾವಾ ಸಂಖ್ಯೆ 82/1996 ಆದೇಶದ ವಿರುದ್ದ ಆರ್‌ಎ ಸಂಖ್ಯೆ 77/2005 ನ್ನು ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಹಾವೇರಿಯ ನ್ಯಾಯಾಲಯದಲ್ಲಿ ನಾನೇ ಆರ್‌ಎ ನಂ. 77/2005 ನ್ನು ನನ್ನ ತಂದೆ ಮರಣ ಹೊಂದಿದ ನಂತರ ಮಾಡಿರುತ್ತೇನೆ ಎಂದರೆ ಸರಿ. ನಜೀರಅಹ್ಮದ ಮಾಲದಾರ ಅವರು ಡಿಕ್ರಿದಾರನಿಗೆ ದಾವಾ ಆಸ್ತಿಯನ್ನು ಈ ಮೊದಲೇ ಮಾರಾಟ ಮಾಡಿದ ಕಾರಣ ನಮಗೆ ಮತ್ತೊಮ್ಮೆ ಮಾರಾಟ ಮಾಡುವ ಅಧಿಕಾರ ನಜೀರಅಹ್ಮದ ಮಾಲದಾರ ಅವರಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಆಸ್ತಿಉತಾರಗಳು ಸೃಷ್ಟಿ ಮಾಡಿಕೊಂಡ ದಾಖಲೆಗಳು ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಪ್ರಮಾಣ ಪತ್ರ ಹಾಕಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನ್ನ ಸ್ವಂತಕ್ಕೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ತನಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯು ತನ್ನ ಪ್ರಮಾಣ ಪತ್ರದ ಮೊದಲ ಪ್ಯಾರಾದಲ್ಲಿ ನಜೀರಅಹ್ಮದ ಮಾಲದಾರ ಅವರು ತನಗೆ ಮಾರಾಟ ಮಾಡಿದ ಬಗ್ಗೆ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಕಬ್ಜಾ ಕೊಡುವುದನ್ನು ತಪ್ಪಿಸಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡಿಕ್ರಿದಾರರು ನನಗೆ ಯಾವುದೇ ದಿನಾಂಕದಂದು ಆಸ್ತಿ ಸಂಖ್ಯೆ 132 ಕ್ಕೆ ಸಂಬಂಧಿಸಿದಂತೆ ಯಾವುದೇ ಖರೀದಿ ಪತ್ರವನ್ನು ಮಾಡಿಕೊಡದಿದ್ದರು ಈಗ ಆಸ್ತಿ ಹೊಡೆದುಕೊಳ್ಳಲು ಮತ್ತು ಆಸ್ತಿ ಬಿಟ್ಟು ಕೊಡಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)**

ಓ.ಹೆ.ಕೆ. ಸರಿ ಅದೆ.

ಸಿವ್ಹಿಲ್ ನ್ಯಾಯಾಧೀಶರು ಮತ್ತು ಜೆಎಂಎಫಸಿ
ಸವಣೂರ.